1	2	3	4	5
22.	Chamrajnagar	150	292.10	1.23
23.	Haveri**	79.0	111.82	0.5
24.	Gadag	144	151.39	0.64
25.	Koppal**	83	399.25	1.68
26.	Udupi	301	849.41	3.56
27.	Bagalkot	117	221.34	0.93
	Total	9004	23841.16	

* As on 31.5.2000
** As on 31.3.2000

ರಾಜ್ಯದಲ್ಲಿ ನಷ್ಟದಲ್ಲಿರುವ ನೇಕಾರರ ಸಂಘಗಳ ಅಭಿವೃದ್ಧಿ.

3418(4399) ಶ್ರೀ ಸಭಾಪತಿ ಯು.ಆರ್. (ಉಡುಪಿ) :— ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ನಷ್ಟದಲ್ಲಿರುವ ನೇಕಾರರ ಸಂಘಗಳ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಆ) ಕೇರಳ ತಮಿಳುನಾಡು ಆಂಧ್ರ ಪ್ರದೇಶಗಳಲ್ಲಿ ಕೈಮಗ್ಗದ ಬಟ್ಟೆಗಳಿಗೆ ಸಹಾಯಧನದ ರೂಪದಲ್ಲಿ ನೇಕಾರರ ಸಂಘಗಳಿಗೆ ಅವರು ಉತ್ಪಾದಿಸುವ ಬಟ್ಟೆಗಳಿಗೆ ಶೇ.30ರ ಸಹಾಯಧನ ನೀಡುತ್ತಿದ್ದು ಕರ್ನಾಟಕದಲ್ಲಿ ಸರ್ಕಾರ ಈ ಬಗ್ಗೆ ಯಾವ ಚಿಂತನೆ ನಡೆಸಿದೆ?

ಇ) ರಾಜ್ಯದಲ್ಲಿ ನೇಕಾರರ ಸಂಘಗಳಲ್ಲಿ ಉತ್ಪಾದಿಸಿದ ಕೈಮಗ್ಗ ಬಟ್ಟೆಗಳ ದಾಸ್ತಾನುಗಳು ಮಾರಾಟವಾಗದೆ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಅಧ್ಯಯನ ನಡೆಸಿದೆಯೇ?

ಶ್ರೀ ಎಂ. ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು) :—

ಅ) ಜಿಲ್ಲಾ ವಲಯ ಯೋಜನೆಯಡಿ ನೇಕಾರರ ಸಂಘಗಳಿಗೆ ದುಡಿಮೆ ಬಂಡವಾಳ ಸಾಲ ಮತ್ತು ಹೇರು ಬಂಡವಾಳವನ್ನು ನೀಡಲಾಗುತ್ತಿದೆ. ಸಂಘಗಳು ಉತ್ಪಾದಿಸಿದ ಬಟ್ಟೆಗಳ ಮಾರಾಟದ ಸಲುವಾಗಿ ಕೇಂದ್ರ ಪುರಸ್ಕೃತ ಯೋಜನೆಯಾದ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಯೋಜನೆಯಡಿ 1999-2000 ನೇ ಸಾಲಿನವರೆಗೆ ಸಹಾಯಧನವನ್ನು ಒದಗಿಸುತ್ತಿದ್ದು, ಕೇಂದ್ರ ಸರ್ಕಾರವು ಈ ಯೋಜನೆಯನ್ನು 31-3-2000ಕ್ಕೆ ಅಂತ್ಯಗೊಳಿಸಿದೆ.

ಅಕ್ಟೋಬರ್ 2000 ದಲ್ಲಿ ಭಾರತ ಸರ್ಕಾರವು 2000-01ನೇ ಸಾಲಿನಿಂದ ಹೊಸ ಯೋಜನೆಯಾದ ದೀನದಯಾಳ್ ಹತ್ ಖರ್ಗಾ ಪ್ರೋತ್ಸಾಹದ ಯೋಜನೆಯನ್ನು ಜಾರಿಗೆ ತಂದಿದ್ದು, ಈ ಯೋಜನೆಯಡಿಯಲ್ಲಿಯೂ ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯಧನ ನೀಡಲು ಅವಕಾಶವಿದ್ದು, ಈ ಬಗ್ಗೆ ಆಗತ್ಯ ಕ್ರಮಕ್ಕೆಗೊಳ್ಳಲಾಗುತ್ತಿದೆ.

ಅ) ರಾಜ್ಯದ ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಹಾಗೂ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಗಳಿಗೆ ಅವರು ಉತ್ಪಾದಿಸಿದ ಬಟ್ಟೆಗಳ ಮಾರಾಟದ ಮೇಲೆ ಶೇ.20 ರಷ್ಟು ಸಹಾಯಧನ ನೀಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಗಮನಕ್ಕೆ ಬಂದಿದೆ. ಈ ಬಗ್ಗೆ ಪ್ರತ್ಯೇಕವಾದ ಅಧ್ಯಯನವನ್ನು ನಡೆಸಿರುವುದಿಲ್ಲ.

ಗ್ರಾನೈಟ್ ಕಲ್ಲುಗಳನ್ನು ತೆಗೆಯುವ ಬಗ್ಗೆ ನಿರ್ಬಂಧ.

3410(4421) ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಕಳೆದ ಐದು ವರ್ಷಗಳಿಂದ ಗಣಿಗಳಿಂದ ಗ್ರಾನೈಟ್ ಕಲ್ಲುಗಳನ್ನು ತೆಗೆಯುವ ಬಗ್ಗೆ ನಿರ್ಬಂಧವಿತ್ತೆ

2. ಈ ನಿರ್ಬಂಧವನ್ನು ಸಡಿಲಗೊಳಿಸಿರುವುದು ನಿಜವೇ

3. ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು? (ವಿವರಗಳನ್ನು ಕೊಡುವುದು)

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :—

1. ಇಲ್ಲ

2. ಇಲ್ಲ

3. ಪೋಲೀಸ್ ಮಹಾ ನಿರ್ದೇಶಕರ ವರದಿಯನ್ನು ಆಧರಿಸಿ ಈ ನಿರ್ಬಂಧವನ್ನು ದಿನಾಂಕ 7-7-2000 ರಂದು ಸಡಿಲಗೊಳಿಸಲಾಗಿತ್ತು. ಆದರೆ ಡಾ: ರಾಜ್‌ಕುಮಾರ್‌ರವರ ಅಪಹರಣದ ಹಿನ್ನೆಲೆಯಲ್ಲಿ ದಿನಾಂಕ 2-8-2000ದಿಂದ ಈ ನಿರ್ಬಂಧವನ್ನು ಮುಂದುವರೆಸಿದೆ.